ಶ್ರೀ ಎ. ನಾಗರಾಜು.--ಮಾನ್ಯ ಅಧ್ಯಕ್ಷರೇ, ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಜನವರಿಯಿಂದ ಮಾರ್ಚಿವರೆಗೆ ಹಲವಾರು ಬಾರಿ ಆಕಾಲಿಕ ಮಳೆ ಬಿದ್ದು ದ್ರಾಕ್ಷಿ, ಆಲೂಗಡ್ಡೆ, ಹೂಣಸೆ, ಮಾವು ಟೊಮೋಟೊ, ಕಲ್ಲಂಗಡಿ ಹಾಗೂ ರೇಷ್ಮೆ ಬೆಳೆಗಳೆಲ್ಲಾ ಹಾಳಾಗಿ ರೈತರು ಚಿಂತಾಜನಕ ಪರಿಸ್ಥಿತಿಯಲ್ಲಿದ್ದಾರೆ. ಇವೊತ್ತು ರೈತರು ಉಪಯೋಗ ಮಾಡತಕ್ಕಂಥ ಕೃಷಿ ಉಪಕರಣಗಳ ಹಾಗೂ ರಾಸಾಯನಿಕ ಗೊಬ್ಬರಗಳ ಬೆಲೆ ಜಾಸ್ತಿಯಾಗಿದೆ. ರೈತರು ಸಹಕಾರಿ ಸಂಘಗಳ ಮೂಲಕ ಹಾಗೂ ವಾಣಿಜ್ಯ ಬ್ಯಾಂಕುಗಳ ಮೂಲಕ ಸಾಲ ಪಡೆದು ಈ ಬೆಳೆಗಳನ್ನು ಬೆಳೆದಿದ್ದರು. ಆದರೆ ಆಕಾಲಿಕ ಮಳೆಯಿಂದ ಅವರು ಬೆಳೆದದ್ದೆಲ್ಲಾ ಹಾಳಾಗಿದೆ. ಆದ್ದರಿಂದ ರೈತರು ಪಡೆದ ಅಲ್ಪಾವಧಿ ಸಾಲವನ್ನು, ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತಿಸಬೇಕು ಮತ್ತು ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೂ ಬೆಳೆಯಿಂದ ನಷ್ಟಕ್ಕೆ ಒಳಗಾದವರಿಗೆ ಸೂಕ್ತ ಪರಿಹಾರ ಕೊಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.--ಈ ಎರಡು ಜಿಲ್ಲೆಗಳ ರೈತರ ಸಹಕಾರ ಸಂಘಗಳಿಂದ ಪಡೆದಂಥ ಸಾಲಗಳ ಬಗ್ಗೆ ವರದಿಯನ್ನು ತರಿಸುವುದಕ್ಕೆ ಹೇಳಿದ್ದೇನೆ. ಈ ಬಗ್ಗೆ ನಾನು ಭೂ-ಅಭಿವೃದ್ಧಿ ಬ್ಯಾಂಕ್ ಮತ್ತು ಜಿಲ್ಲಾ ಬ್ಯಾಂಕ್‌ಗಳಿಂದ ವರದಿಯನ್ನು ತರಿಸುತ್ತಿದ್ದೇನೆ. ಈ ಆಕಾಲಿಕ ಮಳೆಯಿಂದ ಬಹಳಷ್ಟು ಜನ ರೈತರಿಗೆ ತುಬಾ ನಷ್ಟವಾಗಿದೆ ಎಂದು ನಾನು ಸಹ ಒಪ್ಪುತ್ತೇನೆ. ಆದ್ದರಿಂದ ಯಾರು ಯಾರು ಅಲ್ಪಾವಧಿ ಸಾಲವನ್ನು ಪಡೆದಿದ್ದಾರೆ, ಅಂತಹವರ ಸಾಲವನ್ನು ರೀಷೆಡ್ಯೂಲ್ ಮಾಡುವುದಕ್ಕೆ ನಮ್ಮ ಇಲಾಖೆ ಪ್ರಯತ್ನ ಮಾಡುತ್ತದೆ.

ಶ್ರೀ ಎ, ನಾಗರಾಜ್.--ರೈತರಿಗೆ ಪರಿಹಾರ ಕೊಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು ?

ಶ್ರೀ ವಿ.ಎಲ್, ಪಾಟೀಲ್.—ಈ ಬಗ್ಗೆ ವರದಿಯನ್ನು ತರಿಸಿಕೊಂಡು ಕಾನೂನು ಪ್ರಕಾರ ರೈತರಿಗೆ ಪರಿಹಾರ ಕೊಡುವುದಕ್ಕೆ ನಾನು ಪರಿಶೀಲನೆ ಮಾಡುತ್ತೇನೆ.

CALLING ATTENTION TO A MATTER OF URGENT PUBLIC IMPORTANCE

Sub :- Hardship Caused to the labouress of earbon Indstrial unit-Arnasikere

Sri G.S. Basavaraj.--I call the attention of the Ministrialtersfor Labour to the hardship caused to the labourers of Carbon Industria, Unit in Arasikere due to the termination of services of labourers of the actory.

Sri Azeez Sait--(Minister for Labour and Wakf).—
I wish to make the following statement:—

The Government of Karnataka have sanctioned a sum of Rs. 46.27 lakhs for the completion of Carbon Unit at Arsikere which belongs to Karnataka State Central Coir Co-operative Development Production and Marketing Society Ltd, Bangalore to set up an Industrial Carboa Unit at Arsikere, making use of coir pith as a raw-material. The Society has already released a sum of Rs 50.60 lakhs towards the cost of the project, but the Consultant and the Contractor Shri M. Aslam Ali, who is entrusted with the completion of the Project on Turn-Key basis has not completed the project till today. As per the agreement entered into between the Society and the Consultant, the Consultant should have completed the project within 8 months from the date of entrustment of Turn-Key

contract. But unfortunately, even though timely financial assistance has been given to the Contractor, he had neither completed the prepalatization unit, nor activated Carbon as per the term of the agreement. As a result, the Society has to pay a sum of Rs. 3 to 4 laksh per annum to NCDC which is a financing agency. The Consultant has miserably failed to complete the project and as per the turn-key contract, he should hand over the entire project to the Society after taking trial production as per the agreement.

The Society has released a sum of Rs. 30,000/- on 20-2-1983 with a hope that the Consultant would complete the Activated Carbon Unit before 31st March 1983 positively. He took Rs. 30,000/- and has not turn up to the premises of the Carbon Unit till yesterday. It is clear that the Consultant-cum-Contractor, has completely misutilised the amount and has not utilised for the purpose for which it is given.

It is a fact that the Society had given 30 to 40 labourers to the Carbon Unit for carrying shell and cleaning the same. Since the Unit has become defunct and the Society has to pay exhorbitant interest, it is not possible for the Society to run the unit on sound and economic footing. As a result, the Society has dispensed with the services of labourers, since the Consultant and the Contractor is not coming to the site for the past two months, even though timely funds are released to him by the Society.

ಶ್ರೀ ಜಿ.ಎಸ್. ಬಸವರಾಜ್.—ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟನ್ನು ಓದಿದರು. ಈಗ ಅಲ್ಲಿ ಸೆಲ್ಫ್ ಏನು ಮಾಡುತ್ತಿದ್ದಾರೆ, ಅವರು ತೆಂಗಿನ ನಾರಿನಿಂದ ಬರತಕ್ಕ ಬೂದಿಯಲ್ಲಿ ಸೆಲ್ಫ್ ಮಾಡತಕ್ಕಂಥಾದ್ದು ಟೆಕ್ನಿಕಲ್ ಒಪ್ಪಿಗೆಯಾಗಿದೆ. ಇವರು ಚಿಪ್ಪನ್ನು ಸುಟ್ಟು ಇದ್ದಿಲ್ಲು ಮಾಡುವಂತಹ ಪದ್ಧತಿ ಇದೆ. ಇದು ಪತ್ರಿಕೆಯಲ್ಲೂ ಬಂದಿರುವುದನ್ನು ತಮ್ಮ ಮುಂದೆ ಇಡುವುದಕ್ಕೆ ಇಚ್ಛಿಪಡುತ್ತೇನೆ. ಅರಸೀಕೆರೆಯಲ್ಲಿ ಇರತಕ್ಕಂಥಾ ಘಟಕದಲ್ಲಿ ಲಕ್ಷಾಂತರ ರೂಪಾಯಿಗಳು ಮಿಸ್‌ಯುಟಿಲೈಸ್ ಆಗಿದೆ. ಇದರ ಬಗ್ಗೆ ಸಿ.ಬಿ.ಐ. ವಿಚಾರಣೆ ಆಗಬೇಕೆಂದು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲೂ ಸಹ ಬಂದಿದೆ. ಈಗ ಅಲ್ಲಿ ದುರುಪಯೋಗ ಏನಾಗಿದೆ, ಸಂಬಂಧಪಟ್ಟ ಅಧಿಕಾರಿಗಳು ಏನು ಇದ್ದಾರೆ, ಆಡಳಿತಮಂಡಳಿಯವರು ಏನು ಇದ್ದಾರೆ ಇವರ ಬಗ್ಗೆ ಒಂದು ಸಿ.ಬಿ.ಐ. ಅಥವಾ ಸಿ.ಓ.ಡಿ. ವಿಚಾರಣೆ ಆಗಬೇಕು ಮತ್ತು ಫಂಡ್ಸ್ ಅದನ್ನು ಕಂಟ್ರಾಟರಕ್ಟ್‌ಸ್ಗೆ ಕೊಟ್ಟಿದ್ದಾರೆ. ಅವರ ಸ್ಟೇಟ್‌ಮೆಂಟ್‌ನಲ್ಲೂ ಕೂಡ ಹೇಳಿದ್ದಾರೆ. ಕಂಟ್ರಾಕ್ಟರ್ಸ್ ಫಂಡ್ಸನ್ನು ಯುಟಿಲೈಸ್ ಮಾಡಿದ್ದಾರೆ. ಇದು ಕಂಟ್ರಾಕ್ಟರಿಗೂ ಲೇಬರರ್ಸಿಗೂ ಬರತಕ್ಕ ಪ್ರಶ್ನೆ ಅಲ್ಲ. ಆದ್ದರಿಂದ ಸಂಬಂಧಪಟ್ಟ ಲೇಬರರ್ಸ್‌ಗೆ ಪರಿಹಾರವನ್ನು ಒದಗಿಸಿಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

Sri Azeez Sait.---There are tow things involved (i) misuse of funds; and (ii) unit is defunct. Why? This is a matter which does not come under me because I am only concerned with the labour. However, since the matter has come to my notice, I will ask the Director of Industries Department and the Jt. Director of Industries to take immediate suitable action. ಸಿ.ಬಿ.ಐ. ಅಥವಾ ಸಿ. ಒ. ಡಿ. ವಿಚಾರಣೆ ಮಾಡಬೇಕೋ ಆ ತರಹ I will try to do it.

As far as labour is concerned, if they are put in more than one year of service, they are bound to get whatever compensation they

are eligible, they will get it and there is no problem but my information is that they have not put in more than one year of service. If they have put in, I will try to see what best could be done. The whole difficulty is that the man himself, is not traceable. I will try my best.

ಶ್ರೀ ಬಿ.ಎಸ್. ಬಸವರಾಜ್.--ಅದೇ ಏರಿಯಾದಲ್ಲಿ ಟೆಕ್ನಿಕಲ್ ಮ್ಯಾನ್ ಇದ್ದಾನೆ. ಆ ಮನುಷ್ಯ ಶಿವಮೊಗ್ಗದಲ್ಲಿ ಈ ತರಹ ಮಾಡಿ ಇಂಡಸ್ಟ್ರೀಸ್ ಡೀಫಂಕ್ ಮಾಡುವುದಕ್ಕೆ ಮಾಡಿದ್ದಾನೆ. ಪ್ರೀಪ್ಲಾಟಿ ವಿತ್ ದಿ ಮ್ಯಾನೇಜ್‌ಮೆಂಟ್ ಮಾಡಿರತಕ್ಕದ್ದು ಇದು, 420 ಸೆಕ್ಷನ್ ಬರುತ್ತದೆ, ದಯವಿಟ್ಟು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

Mr. Speaker.—The Hon.Member is saying that he is trying to open another unit at Shimoga.

ಶ್ರೀ ಜಿ. ಎಸ್. ಬಸವರಾಜ್.--ಮಾನ್ಯ ಮಂತ್ರಿಗಳಾದ ಶ್ರೀ ದೇವೇಗೌಡರು ಮತ್ತು ಶ್ರೀ ಬೊಮ್ಮಾಯಿಯವರು ಈ ಘಟಕವನ್ನು ಪ್ರಾರಂಭ ಮಾಡುವುದಕ್ಕೆ ಹೋಗಿದ್ದರು. ಅದಾದ ನಾಲ್ಕು ತಿಂಗಳಿಗೆ ಡೀಫಕ್‌ಂಟ್ ಎಂದು ಹೇಳಿದರೆ ಸಂಶಯಕ್ಕೆ ಕಾರಣವಾಗುತ್ತದೆ. ಆ ಸಂಶಯಕ್ಕೆ ಅವಕಾಶ ಮಾಡಿಕೊಡದೇ ಡೀಫಂಕ್‌ಟ್ ಸೊಸೈಟಿ ಏನು ಇದೆ ಸುಮಾರು 50 ಲಕ್ಷ ರೂಪಾಯಿಗಳ ಸೊಸೈಟಿ ಮಾಡಿ ಟೆಕ್ನಿಕಲ್ ಒಪಿನಿಯನ್ ತೆಗೆದುಕೊಂಡು ಅದನ್ನು ಸರಿಪಡಿಸಲಿಕ್ಕೆ ಸಾಧ್ಯ ಇಲ್ಲವೇ ಎಂದು ಸರ್ಕಾರವನ್ನು ಕೇಳುತ್ತೇನೆ.

Sri Azeez Sait.—I have already said that I will get it examined. The Hon.Member has stated that Sri Devegowda and Sri Bommai had inauguarated, this unit. It is possible because as he himself said that man is 420 and he must have come and given wrong or false information to the Public persons and they must have agreed to inaugurate.

Mr. Speaker.—It is over now.

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೆ ನಾನು ಒಂದು ನೋಟೀಸ್ ಕಳುಹಿಸಿದ್ದೆ.

ಅಧ್ಯಕ್ಷರು.—ಗಮನ ಸೆಳೆಯುವ ಸೂಚನೆ ಮುಗಿದು ಹೋಯಿತು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ಸ್ವಾಮಿರಾವ್.--ನೀವು ಹೆಸರು ಕರೆಯುವಾಗ ಮಧ್ಯೆ ಬಾಯಿ ಹಾಕಬಾರದೆಂದು ಸುಮ್ಮನೆ ಕುಳಿತಿದ್ದೆ, ದಯವಿಟ್ಟು ಅವಕಾಶ ಮಾಡಿಕೊಡಿ.

ಅಧ್ಯಕ್ಷರು.--ಈಗಾಗಲೇ ಅದೆಲ್ಲಾ ಮುಗಿದಿದೆ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ಸ್ವಾಮಿರಾವ್.--ಇದು ಬಹಳ ಮುಖ್ಯವಾದ ವಿಚಾರ. ವಿಧಾನಸಭೆ ನಡೆಯುತ್ತಿರುವಾಗಲೇ ಆಗುತ್ತಿದೆ.

ಅಧ್ಯಕ್ಷರು.--ವಿರೋಧಪಕ್ಷದ ನಾಯಕರು ಆಗಲೇ ಪ್ರಸ್ತಾಪ ಮಾಡಿದ್ದಾರೆ. ಮಂತ್ರಿಗಳು ಉತ್ತರಕೊಟ್ಟಿದ್ದಾರೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಮಧ್ಯೆ ಮಧ್ಯೆ ಎದ್ದರೆ, ನೀವು ಮಧ್ಯೆ ಮಧ್ಯೆ ಏತಕ್ಕೆ ಏಳುತ್ತೀರಿ ಎನ್ನುತ್ತೀರಿ. ಸುಮ್ಮನೆ ಕುಳಿತರೆ, ನೀವು ಸುಮ್ಮನೆ ಕುಳಿತಿರಿ ಎಂದು ಹೇಳುತ್ತೀರಿ. ಇದಕ್ಕೆ ನಾವು ಏನು ಮಾಡಬೇಕು ? ದಯವಿಟ್ಟು ನನಗೆ ತಾವು ಅವಕಾಶ ಮಾಡಿಕೊಡಬೇಕು.

Mr. Speaker.—Now, the hon.Member Sri Sangameswara Sardar will initiate the debate.

Sri B. Swamy Rao.—Sir....

Mr. Speaker.—I have gone too far. The hon. Leader of the Opposition has already raised it.

Sri S. Bangarappa.—Sir, I was not present when this matter was touched upon by the hon. Leader of the Opposition. ಈ ನಿಯಮ 334ರ ಬಗ್ಗೆ ಬೇರೆಯವರೂ ಕೊಟ್ಟಿರುತ್ತಾರೆ; ನಾವೂ ಕೊಟ್ಟಿರುತ್ತೇವೆ. ಪ್ರಸ್ತಾಪಮಾಡುವಾಗ ಕೆಲವು ವಿಚಾರಗಳನ್ನು ನಾವು ಹೇಳಬಹುದು, ಇನ್ನು ಕೆಲವು ವಿಚಾರಗಳನ್ನು ಅವರು ಹೇಳಬಹುದು. ಇನ್ನು ಕೆಲವರು ನಾವು ಮಾತನಾಡುವುದು ಬೇಡ; ಮಂತ್ರಿಗಳು ಉತ್ತರ ಕೊಟ್ಟರೆ ಸಾಕು ಎಂದು ಹೇಳುತ್ತಾರೆ. ಈ ಸಭೆಯ ಅಮೂಲ್ಯ ವೇಳೆಯನ್ನು ಹಾಳುಮಾಡಬೇಕೆಂಬ ಉದ್ದೇಶ ನಮಗಿಲ್ಲ. ನಾವು ಏತಕ್ಕೆ ಈ ರೀತಿ ಕೇಳುತ್ತಿದ್ದೇವೆಂಬುದನ್ನು ಮಾನ್ಯ ಮಂತ್ರಿಗಳು ಅರ್ಥ ಮಾಡಿಕೊಂಡು; ಅವರು ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆಂಬ ಬಗ್ಗೆ ಒಂದು ಹೇಳಿಕೆ ಕೊಟ್ಟರೆ ಸಾಕು.

Mr. Speaker.—You came very late. You were not present. It Sri Swamy Rao were to be present at that time, I would have gladly allowed, him.

ಶ್ರೀ ಎಸ್. ಬಂಗಾರಪ್ಪ.—ತಾವು ನನ್ನ ಅಭಿಪ್ರಾಯವನ್ನು ಅರ್ಥಮಾಡಿಕೊಳ್ಳಲಿಲ್ಲ. ಈ ವಿಚಾರದಲ್ಲಿ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ಅಥವಾ ತೆಗೆದುಕೊಳ್ಳುತ್ತಾರೆ ಎಂಬುದನ್ನು ಒಂದು ಹೇಳಿಕೆಯ ರೂಪದಲ್ಲಿ ಸದನಕ್ಕೆ ತಿಳಿಸಬೇಕಾಗುತ್ತದೆ. ಅವರು ತಿಳಿಸದಿದ್ದರೆ ನಾವು ಪ್ರತಿಭಟನೆ ಮಾಡಬೇಕಾಗುತ್ತದೆ.

Mr. Speaker.—We have already brought it to the notice of the Government as well as to the Minister. If they have got information they would certainly reply. On many occasions they have done so. If they do not have any information on hend they will provide you afterwords. But you are insisting now; I do not know why?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕ ವಿಚಾರಗಳಿಗೆ ಸಂಬಂಧಪಟ್ಟಂತೆ ಒಂದು ಹೇಳಿಕೆಯನ್ನು ಈ ಸದನದಲ್ಲಿ ಕೊಡುತ್ತೇವೆಂಬ ಅಭಿಪ್ರಾಯವನ್ನು ಅವರು ಕೊಟ್ಟ ಮೇಲೆ ಇದುವರೆಗೂ ಅಂದರೆ ಸುಮಾರು 15-20 ದಿವಸ ಆದಮೇಲೂ ಕೂಡ ನಮಗೆ ಹೇಳಿಕೆಯನ್ನು ಕೊಟ್ಟಿಲ್ಲ. ಬೇಕಾದರೆ ತಾವು ಅವತ್ತಿನ ಸಭೆಯ ನಡವಳಿಕೆಗಳನ್ನು ತೆಗೆದುನೋಡಿ.

ಅಧ್ಯಕ್ಷರು.—ಈ ವಿಚಾರವನ್ನು ತಿಳಿಸುವುದಕ್ಕೆ....

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ನಾನು ಬಹಳ ಆಳವಾಗಿ ಇದನ್ನು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಸಮಸ್ಯೆ ಏನು ಎಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕು. ಸರ್ಕಾರ ಎಂದರೆ ಈ ಸದನದ ಒಂದು ಭಾಗ ಎಂದು ಅರ್ಥ. ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಈ ಸದನದಲ್ಲಿ ಒಬ್ಬ ಸಬ್ ಇನ್‌ಸ್ಪೆಕ್ಟರ್‌ನ್ನು ಸಸ್ಪೆಂಡ್ ಮಾಡುವುದಕ್ಕೆ ಅಧಿಕಾರ ಇದೆಯೇ?

ಅಧ್ಯಕ್ಷರು.—ತಾವು ಮತ್ತೆ ಹಿಂದಕ್ಕೆ ಏತಕ್ಕೆ ಹೋಗುತ್ತೀರಿ?

ಶ್ರೀ ಎಸ್. ಬಂಗಾರಪ್ಪ.—ಕಾರ್ಯಕ್ರಮವನ್ನು ಹಾಕಿಕೊಳ್ಳತಕ್ಕ ಸರ್ಕಾರಕ್ಕೆ ನಾವು ಹೇಳಬೇಕಾಗುತ್ತದೆ. ಆವರು ಈ ಸದನಕ್ಕೆ ಹೇಳಿಕೆಯನ್ನು ಕೊಡಬೇಕು.

Mr. Speaker.—I will not only ask the Government to reply but also direct them to give information. When such is the case, you are not strengthening my hands.

Sri S. Bangarappa.—Still I expect from the Government that they should come out openly that they are going to make a statement.

Mr. Speaker.—The Leader of the Opposition himself has been convinced.

Sri S. Bangarappa.—It is left to him.

(INTERRUPTION)

Sri S. Bangarappa.—As a matter of principle I have stood up.

Mr. Speaker.—You have come late. And also you are arguing a very bad case. You are not a signatory.

Sri S. Bangarappa.—Sir, the hon. Leader of the Opposition, Sri M. Veerappa Moily, the hon. Members Sri Swamy Rao, Sri Suryanarayana Rao,-all of them have put their signatures, but you have not called the hon. Member Sri Swamy Rao.

ಅಧ್ಯಕ್ಷರು.—ನಿಯಮ 334 ಆಗಿಹೋಯಿತು, ನಂತರ ಗಮನ ಸೆಳೆಯುವ ಸೂಚನೆ ಕೂಡ ತೆಗೆದುಕೊಂಡಿದ್ದಾಯಿತು. ಅದು ಮುಗಿದಮೇಲೆ ಈಗ ಎಜೆಂಡಾದಲ್ಲಿರುವ ಬೇರೆ ವಿಷಯ ಪ್ರಸ್ತಾಪ ಮಾಡಬೇಕೆಂದು ತೆಗೆದುಕೊಂಡಿದ್ದೇವೆ....

Sri S. Bangarappa.—Sri Swamy Rao was not called. I have been trying ಎಂದು ಮಾನ್ಯ ಸದಸ್ಯರಾದ ಸ್ವಾಮಿರಾವ್‌ರವರು ಹೇಳುತ್ತಲೇ ಇದ್ದಾರೆ.

Mr. Speaker.—If every member wants to speak on all matters under 334, I cannot help. If that is the case, we will take it up in the B.A.C. and decide. I do not know why....

ಶ್ರೀ ಎಸ್. ಬಂಗಾರಪ್ಪ.—ಈ ವಿಚಾರ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ಆಗಿರುತ್ತದೆ. ಅದನ್ನು ಇಲ್ಲಿ ಚರ್ಚೆಮಾಡುವುದು ಬೇಡ. ತಮಗೆ ನಾವು ಅಧಿಕಾರವನ್ನು ಕೊಟ್ಟಿದ್ದೇವೆ. ಇವತ್ತಿನ ವಿಚಾರ ಬಹಳ ಪ್ರಮುಖವಾದುದು. ಇಂಥ ಒಂದು ಪರಿಸ್ಥಿತಿ ಹಿಂದೆ ಕೂಡ ಎಷ್ಟೊ ಸಾರಿ ಬಂದಿದೆ. ಇವತ್ತು ನಮ್ಮ ಪರಿಸ್ಥಿತಿ ಮತ್ತು ನಮ್ಮ ಉದ್ದೇಶವನ್ನು ತಾವು ಅರ್ಥಮಾಡಿಕೊಳ್ಳಬೇಕು ಈ ವಿಚಾರದಲ್ಲಿ ನಾವು ಯಾರೂ ಮಾತನಾಡಿಲ್ಲ....

ಅಧ್ಯಕ್ಷರು.—ಇದೇನು ಬಂಗಾರಪ್ಪನವರೆ, ತಾವು ಇವತ್ತು ಹೊಸ ರೀತಿಯಲ್ಲಿ ಆರ್ಗ್ಯುಮೆಂಟ್ ಮಾಡುತ್ತಿದ್ದೀರಿ. ನಿಯಮ 334ರಲ್ಲಿ ಯಾರು ಸಹಿ ಮಾಡಿರುತ್ತಾರೆ ಅವರು ಒಮ್ಮೆ ವಿಚಾರವನ್ನು ಪ್ರಸ್ತಾಪ ಮಾಡಿದಮೇಲೆ ಮತ್ತೆ ಅದರ ಮೇಲೆ ಪ್ರಶ್ನೆ ಹಾಕುವುದಕ್ಕೆ ಅವಕಾಶವೇ ಇಲ್ಲ. ಆಗಲೇ ಈ ವಿಚಾರ ಬಂದಾಗ ಮಾನ್ಯ ಸದಸ್ಯರು ಮಾತನಾಡದೆ ಸುಮ್ಮನೆ ಕುಳಿತಿದ್ದರು. It was only when the matter was raised by the hon. Leader of the Opposition, the Minister came out with a reply.

Sri S. Bangarappa.—Sir, kindly direct the Minister to make a statement.

Mr. Speaker.—Let us not go back.

ಶ್ರೀ ಎಸ್. ಬಂಗಾರಪ್ಪ.—ನಾವು ಈ ವಿಚಾರದಲ್ಲಿ ಎಷ್ಟು ಸಹಕಾರವನ್ನು ಕೊಡಬೇಕೋ ಅಷ್ಟನ್ನೂ ಕೊಟ್ಟಿದ್ದೇವೆ. ಮಾನ್ಯ ಮಂತ್ರಿಗಳಿಂದ ಇದರ ಬಗ್ಗೆ ಸ್ಟೇಟ್‌ಮೆಂಟ್ ಮಾಡಿಸಬೇಕೆಂದು ಇಚ್ಛೆ ಇದೆ. ಅವರು ಏನು ಕ್ರಮ ತೆಗೆದುಕೊಂಡಿದ್ದಾರೆಂದು ಕೇಳಬೇಕಾಗಿದೆ, ಅದೇರೀತಿ ಮಾನ್ಯ ವಿರೋಧಪಕ್ಷದ ನಾಯಕರಿಗೂ ಒಂದುರೀತಿಯ ಆಸೆ ಇದೆ. ಬೇರೆ ಸದಸ್ಯರಿಗೆ ಇನ್ನೊಂದುರೀತಿ ಇಚ್ಛೆ ಇರಬಹುದು.

ಅಧ್ಯಕ್ಷರು.—ಮತ್ತೆ ಹಿಂದಕ್ಕೆ ಹೋಗುವುದು ಬೇಡ.

ಶ್ರೀ ಎಸ್. ಬಂಗಾರಪ್ಪ.--ಮತ್ತೆ ಹಿಂದಕ್ಕೆ ಹೋಗುವುದು ಬೇಡ ಎಂದರೆ ಹೇಗೆ ಸಾಧ್ಯವಾಗುತ್ತದೆ ? ಒಬ್ಬೊಬ್ಬರಿಗೆ ಒಂದೊಂದು ರೀತಿ ಉದ್ದೇಶ ಇರುತ್ತದೆ. ಒಬ್ಬರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಸಾಕು ಎಂದು ಇರುತ್ತಾರೆ. ಇನ್ನೊಬ್ಬರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಡದಿದ್ದರೂ ಪರವಾಗಿಲ್ಲ ಮಂತ್ರಿಗಳು ಹೇಳಿಕೆ ಕೊಟ್ಟರೆ ಸಾಕು ಎಂದು ಇರುತ್ತಾರೆ; ಇನ್ನೊಬ್ಬರು ನನಗೆ ಯಾವುದೂ ಬೇಡ ಮಂತ್ರಿಗಳು ಏನು ಕ್ರಮ ತೆಗೆದುಕೊಂಡಿದ್ದಾರೆಂದು ಹೇಳಿದರೆ ಸಾಕು ಎಂದಿರುತ್ತಾರೆ. ಸ್ವಾಮಿ, ಈ ವಿಚಾರದಲ್ಲಿ ಮಂತ್ರಿಗಳಿಂದ ಒಂದು ಸ್ಟೇಟ್‌ಮೆಂಟ್ ಮಾಡಿಸದಿದ್ದರೆ ನಾವು ಸದನಕ್ಕಾದರೂ ಏತಕ್ಕೆ ಬರಬೇಕು ? ಕೇವಲ ಸರ್ಕಾರದ ಗಮನಕ್ಕೆ ತಂದು ಹೊರಟು ಹೋಗಬಹುದಲ್ಲ.

ಅಧ್ಯಕ್ಷರು.- 334ರಲ್ಲಿ ಇದಕ್ಕಿಂತ ಹೆಚ್ಚು ಮುಂದಕ್ಕೆ ಹೋಗುವುದಕ್ಕಾಗುವುದಿಲ್ಲ.

Sri S. Bangarappa.—We are again stressing that the Government should come out with a statement.

Mr. Speaker.—On which issue ?

Sri S. Bangarappa.—Depending upon the importance of the issue.

Mr. Speaker.—You are asking the Government to make a statement on a matter sent notice of by the other Members i. e., for which you are not a signatory.

Sri S. Bangarappa.—We have got every right. It is the right of the hon. Member of this House.

Mr. Speaker.—Today I am surprised to see the argument of the hon. Member Sri S. Bangarappa.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ನಾವು ಇದಕ್ಕೆ ಸಹಿಯನ್ನಾದರೂ ಏತಕ್ಕೆ ಹಾಕಿ ಕಳಿಸಿಕೊಡಬೇಕು ? ಇವತ್ತು ನಮ್ಮ ಪಕ್ಷದ ಸದಸ್ಯರು ಸಹಿ ಹಾಕಿ ಕಳುಹಿಸಿಕೊಟ್ಟಿರತಕ್ಕ ವಿಚಾರದಲ್ಲಿ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ನಾನು ಕೇಳಬಯಸುತ್ತೇನೆ.

ಅಧ್ಯಕ್ಷರು.—ನಿಯಮ 334 ರಲ್ಲಿ ಸಹಿ ಹಾಕಿ ಕಳುಹಿಸಿರತಕ್ಕ ಎಲ್ಲ ಮಾನ್ಯ ಸದಸ್ಯರೂ ಮಾತನಾಡಬೇಕೆಂದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ಆದರೆ ಆಗ ನನ್ನದೇನೂ ಅಭ್ಯಂತರ ಇಲ್ಲ. ವಿಷಯ ಪ್ರಸ್ತಾಪಕ್ಕೆ ಬಂದಾಗ ಆದರಬಗ್ಗೆ ನಾನು ಹೆಚ್ಚು ಆಸಕ್ತಿವಹಿಸಿ ಯಾರ್‍ಯಾರಿಗೆ ಎಷ್ಟೆಷ್ಟು ಅವಕಾಶವನ್ನು ಮಾಡಿಕೊಡುತ್ತಿದ್ದೇನೆ. ಆ ಸಂದರ್ಭದಲ್ಲಿ ಕೆಲವು ಮಾನ್ಯ ಸದಸ್ಯರು ಮಾತನಾಡುತ್ತಾರೆ. ಮತ್ತೆ ಕೆಲವರು ಮಾತನಾಡುವುದಿಲ್ಲ. ಇನ್ನು ಕೆಲವು ಸಂದರ್ಭದಲ್ಲಿ ಸಹಿ ಹಾಕಿರತಕ್ಕ ಎಲ್ಲ ಸದಸ್ಯರ ಪರವಾಗಿ ಯಾರಾದರೂ ಒಬ್ಬರು ಮಾತನಾಡಿದರೆ ಸಾಕು ಎಂದು ಉಳಿದವರು ಸುಮ್ಮನೆ ಕುಳಿತು ಬಿಡುತ್ತಾರೆ. ಆಗ ಬಹುಶಃ ಒಬ್ಬರು ಮಾತನಾಡುವುದಕ್ಕೆ ಎಲ್ಲರಿಗೂ ಸಮಾಧಾನವಾಗಿರಬಹುದೆಂದು ತಿಳಿದು ನಾನೂ ಕೂಡ ಸುಮ್ಮನಾಗುತ್ತೇನೆ.

1-00 p.m.

When the same issue is taken the Hon'ble Member will have to say that he has got to say something. But he does not say that.

Sri S. Bangarappa.—We have given our co-operation.....

Mr. Speaker.—The Hon'ble Leader of the Opposition has stated that he wants a statement.

Sri S. Bangarappa.—If that is the point, we have no objection at all.

Mr. Speaker.—That is all the point.

Sri S. Bangarappa.—The Hon'ble Minister is present here. If he says that he is going to make a statement, we have no objection.

Mr. Speaker.—How can I force the Minister to make a state ment ?

Sri S. Bangarappa.—Then a point arises as to how can we also sit quiet ? How can we exercise our rights and responsibility ?

Mr. Speaker.–There are umpteen number of provisions for you, which have been framed by one and all of this House and being followed by this House. If you make a reference to any one of those provisions, I shall call upon the Hon'ble Minister to make a statement.

Sri S. Bangarappa.--On the other hand, the Government should luntarily come out with a statement.

Mr. Speaker.—I cannot understand as to how are we concerned with the subject ?

ಶ್ರೀ ಎಸ್. ಬಂಗಾರಪ್ಪ.--ಮಂತ್ರಿಗಳು ಇದ್ದಾರೆ. ಹೇಳಿಕೆಯನ್ನು ಅವರು.....

ಅಧ್ಯಕ್ಷರು.--ಸದನದಲ್ಲಿ ತುರ್ತಾಗಿ ಪ್ರಸ್ತಾಪಿಸಿರುವ ವಿಷಯಗಳಲ್ಲಿ ಸುಮಾರು 100ಕ್ಕೆ 90ರಷ್ಟು ವಿಷಯಗಳ ಬಗ್ಗೆ ಸರ್ಕಾರದವರು ಹೇಳಿಕೆ ಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.---ಮುಖ್ಯವಾದಂಥ ಉಳಿದ ಹತ್ತರಷ್ಟು ವಿಷಯಗಳನ್ನು ಬಿಟ್ಟರೆ ಏನು ಮಾಡಬೇಕು ?

ಅಧ್ಯಕ್ಷರು.--ತಾವು ಕೂಡ ಮಂತ್ರಿಗಳಾಗಿ ಕಾರ್ಯ ನಿರ್ವಹಿಸಿದ್ದೀರಿ. ವಿವರಗಳನ್ನು ತರಿಸುವುದ ಕ್ಕಾದರೂ ಸಮಯ ಬೇಡವೇ ?

ಶ್ರೀ ಎಸ್. ಬಂಗಾರಪ್ಪ.—ಹೇಳಿಕೆಯನ್ನು ಕೂಡಲೇ ಮಾಡಬೆಕೆಂದು ಅಲ್ಲ. ಆದರೆ ಸರ್ಕಾರದ ವರು ತಾವಾಗಿಯೇ ಮುಂದೆ ಬಂದು ಹೇಳಿಕೆ ಕೊಡಬೇಕಾಗಿತ್ತು. ಈಗ ಮಾಹಿತಿ ಇಲ್ಲದಿದ್ದರೆ ಅದನ್ನು ತರಿಸಿಕೊಂಡು ಹೇಳಿಕೆ ನೀಡಲಿ.

Mr. Speaker.--We will look into that mater latter. Now we will go to the discussion on the Karnataka Zilla Parishads, Taluk Panchayat Samithis, Mandal Panchayats and Nyaya Panchayats Bill, 1983. Hon'ble Member Dr. Sangameshwar Sardar to speak.

The Karnataka Zilla Parishads, Taluk Panchasath Samithis. Mandal Panchayath and Nyaya Panchayath Bill 1983

Motion to Conclude

ಶ್ರೀ ಸಂಗಮೇಶ್ವರ ಸರದಾರ್.—ಮಾನ್ಯ ಅಧ್ಯಕ್ಷರೆ, ಗ್ರಾಮಾಭಿವೃದ್ಧಿ ಹಾಗೂ ಜಿಲ್ಲಾ ಪರಿಷತ್ ಮಸೂದೆಯನ್ನು ಸ್ವಾಗತಿಸುತ್ತಾ, ಕೆಲವು ಮಾತುಗಳನ್ನಾಡಬಯಸುತ್ತೇನೆ. ಈ ಮಸೂದೆಗೆ ಜಿಲ್ಲಾ ಪರಿಷತ್ ಎಂಬ ಹೆಸರೇನಿದೆ ಅದನ್ನು ನನ್ನ ಅಭಿಪ್ರಾಯದಲ್ಲಿ ಮಾನ್ಯ ಮಂತ್ರಿಗಳು ಬದಲಾವಣೆ